# ಸುನಿಲ್ ಆಗ್ರೋ ಫುಡ್ಸ್ ಲಿಮಿಟೆಡ್

**CIN:L01111KA1988PLC008861**

**ನೊಂದಾಯಿತ ಕಚೇರಿ: ಪ್ಲಾಟ್ ನಂ.39–ಎ2, ಹೊಸಕೋಟೆ ಕೈಗಾರಿಕಾ ಪ್ರದೇಶ, ಚೊಕ್ಕಹಳ್ಳಿ, ಹೊಸಕೋಟೆ, ಬೆಂಗಳೂರು – 562 114. Ph: 080-27971371 / 27971463**

**e-mail: info@sunilagro.in. Website: www.sunilagro.in**

## 34ನೇ ವಾರ್ಷಿಕ ಸಾಮಾನ್ಯ ಸಭೆಯ ಷೇರುದಾರರಿಗೆ ಸೂಚನೆ

ದಿನಾಂಕ ಮೇ 5, 2022 ರ ಸಾಮಾನ್ಯ ಸುತ್ತೋಲೆ ಸಂ. 02/2022, ದಿನಾಂಕ ಡಿಸೆಂಬರ್ 8, 2022 ರ ಸುತ್ತೋಲೆ ಸಂ. 19/2021 ರ ಅನುಪಾಲನೆಗೆ ಅನುಗುಣವಾಗಿ ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವಾಲಯ (MCA), ಭಾರತ ಸರ್ಕಾರ ಮತ್ತು ಭಾರತದ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (SEBI) ಹೊರಡಿಸಿರುವ ಇತರ ಸುತ್ತೋಲೆಗಳಿಗೆ ಅನುಗುಣವಾಗಿ ಸಭೆಯ ಸೂಚನಾಪತ್ರದಲ್ಲಿ ತಿಳಿಸಿರುವಂತೆ ವ್ಯವಹಾರಗಳನ್ನು ನಡೆಸಲು ಆಗಸ್ಟ್ 23, 2022, ಮಂಗಳವಾರದಂದು ಮಧ್ಯಾಹ್ನ 12.30 ಕ್ಕೆ ವಿಡಿಯೋ ಕಾನ್ಫರೆನ್ಸ್ (VC) ಮತ್ತು ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM) ಮೂಲಕ ಕಂಪನಿಯ ಮೂವತ್ತನಾಲ್ಕನೆ (34ನೇ) ವಾರ್ಷಿಸಕ ಸರ್ವಸದಸ್ಯರ ಸಭೆಯನ್ನು ನಡೆಸಲಾಗುತ್ತದೆ.

ಮೇಲೆ ತಿಳಿಸಲಾಗಿರುವ (MCA) ಸುತ್ತೋಲೆಗಳು ಮತ್ತು ಮೇ 13, 2022 ದಿನಾಂಕದ SEBI ಸುತ್ತೋಲೆ ಸಂ. 62ಕ್ಕೆ ಅನುಗುಣವಾಗಿ, ವಾರ್ಷಿಕ ಮಹಾಸಭೆಯ ಸೂಚನೆ ಮತ್ತು ವಾರ್ಷಿಕ ವರದಿ 2021–22 ಅನ್ನು, ಸಂಸ್ಥೆಯ/ಡೆಪಾಸಿಟರಿಗಳಲ್ಲಿ ನೋಂದಣಿಯಾದ ಇ-ಮೇಲ್ ವಿಳಾಸಗಳಿರುವ ಸದಸ್ಯರಿಗೆ ಕೇವಲ ವಿದ್ಯುನ್ಮಾನ ರೂಪದಲ್ಲಿ ಮಾತ್ರ ಕಳುಹಿಸಲಾಗಿದೆ. (AGM) ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (CDSL) ಅನ್ನು ಎಲೆಕ್ಟ್ರಾನಿಕ್ ಮೂಲಕ (VC/OAVM) ಸೌಲಭ್ಯ ಮತ್ತು ಮತದಾನವನ್ನು ಒದಗಿಸಲು ಕಂಪನಿಯು ನೇಮಕ ಮಾಡಿದೆ. ವಸ್ತಿವಿಧಾನದಲ್ಲಿ ಶೇರುಗಳನ್ನು ಹೊಂದಿರುವ ಶೇರುದಾರರು, ತಮ್ಮ ಡಿಪಾಸಿಟರಿ ಭಾಗೀದಾರರ ಮೂಲಕ ತಮ್ಮ ತತ್ಸಂಬಂಧಿತ ಡಿಪಾಸಿಟರಿಗಳೊಂದಿಗೆ ತಮ್ಮ ಇ–ಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವ ಶೇರುದಾರರು ತಮ್ಮ ಇ–ಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು, ಕಂಪನಿ ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್ (ಶೇರುವರ್ಗಾವಣೆ ಏಜೆಂಟ್) ಆದ ಇಂಟಿಗ್ರೇಟೆಡ್ ರೆಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ **irg@integratedindia.in**ದಲ್ಲಿ ನೋಂದಾಯಿಸಿಕೊಳ್ಳಬೇಕೆಂದು ಕೋರಲಾಗಿದೆ. 34ನೆ ವಾರ್ಷಿಕ ಮಹಾಸಭೆಯ ಸೂಚನೆ ಮತ್ತು ವಾರ್ಷಿಕ ವರದಿ 2021–22, ಸಂಸ್ಥೆಯ ವೆಬ್‌ಸೈಟ್ **www.sunilagro.in,** ಬಿಎಸ್‌ಇದ ವೆಬ್‌ಸೈಟ್ **www.bseindia.com** ಮತ್ತು ಸಿಡಿಎಸ್‌ಎಲ್‌ನ ವೆಬ್‌ಸೈಟ್ **www.evotingindia.com** ನಲ್ಲಿ ಕೂಡ ಲಭ್ಯವಿರುತ್ತದೆ.

ಅಂತಿಮ ಡಿವಿಡೆಂಡ್ ನೀಡುವ ಸಲುವಾಗಿ ಮತ್ತು ವಾರ್ಷಿಕ ಮಹಾಸಭೆಯ ಉದ್ದೇಶಕ್ಕಾಗಿ ಸಂಸ್ಥೆಯ ಸದಸ್ಯರ ನೋಂದಣಿ ಪುಸ್ತಕ ಮತ್ತು ಶೇರು ವರ್ಗಾವಣೆ ಪುಸ್ತಕಗಳು ಬುಧವಾರ, ಆಗಸ್ಟ್ 17, 2022ರಿಂದ ಮಂಗಳವಾರ, ಆಗಸ್ಟ್ 23, 2022ರವರೆಗೆ ಮುಚ್ಚಲ್ಪಟ್ಟಿರುತ್ತವೆ. ನಿರ್ದೇಶಕರ ಮಂಡಳಿಯು ಶಿಫಾರಸು ಮಾಡಿರುವಂತೆ ಅಂತಿಮ ಡಿವಿಡೆಂಡ್ ವಾರ್ಷಿಕ ಮಹಾಸಭೆಯಲ್ಲಿ ಘೋಷಿತಗೊಂಡರೆ, ಸದಸ್ಯರ ನೋಂದಣಿ ಪುಸ್ತಕದಲ್ಲಿ ದಾಖಲಾಗಿರುವ ಸದಸ್ಯರಿಗೆ ಅದನ್ನು ಮೂಲತೆರಿಗೆಯನ್ನು ಕಡಿತಗೊಳಿಸಿದ ಬಳಿಕ ನೀಡಲಾಗುತ್ತದೆ.

ತಮ್ಮ ತಮ್ಮ ಡಿಪಾಸಿಟರೀಸ್ ಭಾಗೀದಾರರೊಂದಿಗೆ(ಡಿಪಿ) ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ನವೀಕೃತಗೊಳಿಸಿರುವ ಸದಸ್ಯರಿಗೆ ಡಿವಿಡೆಂಡ್‌ಅನ್ನು ವಿದ್ಯುನ್ಮಾನ ರೂಪದಲ್ಲೂ, ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ಇನ್ನೂ ನವೀಕರಿಸಬೇಕಾದ ಸದಸ್ಯರಿಗೆ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಅಂಚೆ ಮೂಲಕ ಅವರ ನೋಂದಾಯಿತ ವಿಳಾಸಗಳಿಗೆ ಕಳುಹಿಸಲಾಗುತ್ತದೆ. ಡಿವಿಡೆಂಡ್ ಸ್ವೀಕೃತಿಯು ತಡವಾಗುವುದನ್ನು ತಪ್ಪಿಸಲು ಮತ್ತು ತಮ್ಮ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಡಿವಿಡೆಂಡ್ ಬರುವಂತೆ ಮಾಡಲು, ಸದಸ್ಯರು ತಮ್ಮ ಕೆವೈಸಿ ವಿವರಗಳನ್ನು ತಮ್ಮ ಡಿಪಿ (ವಿದ್ಯುನ್ಮಾನ ರೂಪದಲ್ಲಿ ಹಿಡಿದಿಟ್ಟುಕೊಂಡಿರುವ ಶೇರುಗಳು)ದೊಂದಿಗೆ ನವೀಕರಿಸಬೇಕು ಮತ್ತು ಸಂಸ್ಥೆಯ ಆರ್‌ಟಿಎ (ಭೌತಿಕ ರೂಪದಲ್ಲಿ ಇರುವ ಶೇರುಗಳು) ದೊಂದಿಗೆ ನವೀಕರಿಸಬೇಕೆಂದು ಕೋರಲಾಗಿದೆ.

ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ತಿಳಿಸಲಾಗಿರುವಂತೆ, ಎಲೆಕ್ಟ್ರಾನಿಕ್ ವೋಟಿಂಗ್ ಸಿಸ್ಟಮ್ ಮೂಲಕ ಸದಸ್ಯರು ವ್ಯವಹಾರದ ಕುರಿತು ದೂರದಿಂದಲೇ ತಮ್ಮ ಮತಗಳನ್ನು ಚಲಾಯಿಸುವ ಅವಕಾಶವು ಶೇರುದಾರರಿಗೆ ನೀಡಲಾಗುತ್ತದೆ. ಹೆಚ್ಚುವರಿಯಾಗಿ, ವಾರ್ಷಿಕ ಮಹಾಸಭೆಯಲ್ಲಿ ಇ–ವೋಟಿಂಗ್ ಸಿಸ್ಟಮ್ ಮೂಲಕ ಮತಚಲಾಯಿಸುವ ಸೌಲಭ್ಯವನ್ನೂ ಸಂಸ್ಥೆಯು ಒದಗಿಸುತ್ತಿದೆ. ವಸ್ತುವಲ್ಲದ ರೂಪದಲ್ಲಿ ಶೇರುಗಳನ್ನು ಹೊಂದಿರುವ, ಭೌತಿಕ ರೂಪದ ಶೇರುಗಳನ್ನು ಹೊಂದಿರುವ ಮತ್ತು ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಣಿ ಮಾಡಿರದ ಶೇರುದಾರರಿಗೆ, ದೂರದಿಂದಲೇ ಮತಚಲಾಯಿಸುವ ವಿಧಾನವನ್ನು 'ಶೇರುದಾರರಿಗೆ ಸೂಚನೆಗಳು'ದಲ್ಲಿ ಒದಗಿಸಲಾಗಿರುತ್ತದೆ.

ಆನ್ವಯಿಕ ಕಾನೂನುಗಳಿಗೆ ಅನುಗುಣವಾಗಿ ಕಾಲಾಂತರದಲ್ಲಿ ಶೇರುದಾರರಿಗೆ 34ನೇ ವಾರ್ಷಿಕ ಮಹಾಸಭೆಯ ಸೂಚನೆಯನ್ನು ಅವರ ನೋಂದಾಯಿತ ಇ–ಮೇಲ್ ವಿಳಾಸಗಳಿಗೆ ಕಳುಹಿಸಲಾಗುತ್ತದೆ.

**ಸುನಿಲ್ ಆಗ್ರೋ ಫುಡ್ಸ್ ಲಿಮಿಟೆಡ್ ಪರವಾಗಿ**
**ಅಂಚಲ್ ಸೇಥಿಯಾ**
**ಕಂಪನಿ ಕಾರ್ಯದರ್ಶಿ**
(M. No: A67520)

ಸ್ಥಳ : ಬೆಂಗಳೂರು
ದಿನಾಂಕ: 25.07.2022